Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD


Rtn. Francesco Arezzo
R.I. President


Rtn. K. Palaksha
District Governor

ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ
# ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 42
ದಿನಾಂಕ: 21.04.2026


Rtn. Anil Kumar
President


Rtn. Krishnappa
Secretary

## ಪ್ರವಾಸ ಸಿರಿ, ಹುಟ್ಟುಹಬ್ಬ ಆಚರಣೆ, ಸಸಿ ವಿತರಣೆ








ಸ್ನೇಹ – ಒಡನಾಟಕ್ಕಾಗಿ ರೋಟರಿ ಸಂಸ್ಥೆಯನ್ನು 121 ವರ್ಷಗಳ ಮುಂಚೆ ಹುಟ್ಟು ಹಾಕಿದ Paul Harris (April 19, 1868 – January 27, 1947) ಅವರ ಜನ್ಮದಿನವಾದ ಏಪ್ರಿಲ್ 19ರಂದು ರೋಟರಿ ಐಸಿರಿ ರಿಲ್ಯಾಕ್ಸ್ ಲೀಜರ್ ಪಾರ್ಕ್, ಉಪ್ಪಿನಕೋಟೆಯಲ್ಲಿ "ಪ್ರವಾಸ ಸಿರಿ" ಕಾರ್ಯಕ್ರಮವನ್ನು ಆಯೋಜಿಸಿತು.

ನಾಲ್ಕು ಸುತ್ತಲೂ ವಿಶಾಲ ನದಿಯಿಂದ ಸುತ್ತುವರೆದ ದ್ವೀಪ ಪ್ರದೇಶದ ನೈಸರ್ಗಿಕ, ಶಾಂತ ಪರಿಸರದ ಈ ಪ್ರವಾಸದಲ್ಲಿ ರೋಟರಿ ಐಸಿರಿಯ ಸದಸ್ಯರು ಹಾಗೂ ಕುಟುಂಬದ ಸದಸ್ಯರು ಸೇರಿ ಒಟ್ಟು 17 ಜನರ ತಂಡ ವಿವಿಧ ಬಗೆಯ ಗ್ರೂಪ್ ಗೇಮ್ಸ್, ನೀರಾಟ, ಆಕರ್ಷಕ ಸಾಹಸಮಯ ಚಟುವಟಿಕೆಗಳು, ಊಟ, ಹಾಡು, ನೃತ್ಯ, ದೋಣಿ ವಿಹಾರ ಇತ್ಯಾದಿಗಳಲ್ಲಿ ಪಾಲ್ಗೊಂಡು ಮನೋರಂಜನೆಯೊಂದಿಗೆ ದೈನಂದಿನ ಕೆಲಸಕಾರ್ಯಗಳಿಂದ ಒಂದು ದಿನದ ವಿರಾಮ, ವಿಶ್ರಾಂತಿ ಪಡೆದು ಪ್ರವಾಸವನ್ನು ಆನಂದಿಸಿದರು.

ರೋಟರಿ ಐಸಿರಿಯ ಸದಸ್ಯರು ತಮ್ಮ ಪ್ರವಾಸದ ನಡುವೆಯೇ, ಇದೇ ದಿನ ಹುಟ್ಟು ಹಬ್ಬ ಆಚರಿಸುತ್ತಿರುವ ರೊ. ಸುದರ್ಶನ ಎಸ್. ಪೈ ಅವರಿಗೆ ಶುಭ ಹಾರೈಸಿ, ಪಿಕ್ನಿಕ್ ನಲ್ಲಿ ಭಾಗವಹಿಸಿದ್ದ ರೊ. ಅಶೋಕ್ ನಾಯಕ್ ಅವರ ಮಗ ಶ್ಲೋಕ ನಾಯಕ್ ನ ಹುಟ್ಟುಹಬ್ಬವನ್ನು ಆಚರಿಸಿದರು.

ರೋಟರಿ ಐಸಿರಿಯ ಧ್ಯೇಯವೇ "ನಮ್ಮ ನಡೆ ಕೃಷಿಯ ಕಡೆ". ಪ್ರತೀ ವರ್ಷವೂ ಕೃಷಿ ಮತ್ತು ಪರಿಸರಕ್ಕೆ ಪೂರಕವಾದ ಹತ್ತು ಹಲವು ಕಾರ್ಯಕ್ರಮಗಳನ್ನು ಶ್ರದ್ಧೆಯಿಂದ ಆಯೋಜಿಸುವ ರೋಟರಿ ಐಸಿರಿ, ಈ ಪಿಕ್ನಿಕ್ ನಲ್ಲಿಯೂ ಈ ರಿಲ್ಯಾಕ್ಸ್ ಪಾರ್ಕಿನ ಮುಖ್ಯಸ್ಥರಿಗೆ ಉತ್ತಮ ಗುಣಮಟ್ಟದ – ಮೇಣರಹಿತ ಹಲಸಿನ ಸಸಿ ಮತ್ತು ಸೀಬೆಹಣ್ಣಿನ ಸಸಿ ನೀಡಿ, ಅದನ್ನು ಉತ್ತಮವಾಗಿ ಬೆಳೆಸುವಂತೆ ವಿನಂತಿಸಿದರು.

ಐಸಿರಿಯ ಸಂಘಸೇವಾ ನಿರ್ದೇಶಕರಾದ ರೊ. ಸುನೀಲ್ ಕುಮಾರ್ ಈ ಕಿರುಪ್ರವಾಸವನ್ನು ಯಶಸ್ವಿಯಾಗಿ ಆಯೋಜಿಸಿದರು.

ಅಧ್ಯಕ್ಷರಾದ ರೊ. ಅನಿಲ್ ಕುಮಾರ್, ನಮ್ಮ ಸದಸ್ಯರೂ ಆಗಿರುವ ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್, ರೋಟರಿ ಜಿಲ್ಲೆ 3182ರ ರೋಟರಿ ಸಮುದಾಯದಳದ ಜಿಲ್ಲಾ ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್ ಉಪಸ್ಥಿತರಿದ್ದರು.

ಈ ಪ್ರವಾಸದ ವೇಳೆ ಸದಸ್ಯರು ಸಾಕಷ್ಟು ಛಾಯಾಚಿತ್ರಗಳನ್ನು, ಕಿರು ವಿಡಿಯೋ ಗಳನ್ನು ಸೆರೆಹಿಡಿದಿದ್ದು, ಇದು ಬಹುಕಾಲ ಮನದಂಗಳದಲ್ಲಿ ಅಚ್ಚಳಿಯದೇ ಉಳಿಯುವಂತಾಗಿದೆ ಎಂದು ರೊ. ಸ್ಮಿತಾ ಕಾಮತ್ ಹರ್ಷ ವ್ಯಕ್ತಪಡಿಸಿದರು.

## ಪ್ರೇರಣಾ ಸಿರಿ

Sachin Tendulkar ಅವರ ಜೀವನ ಪಯಣವನ್ನು ನೋಡಿದಾಗ, ಅದು ಕೇವಲ ಕ್ರಿಕೆಟ್ ಸಾಧನೆಗಳ ಸರಮಾಲೆಯಲ್ಲ; ಅದು ಮಾನಸಿಕ ದೃಢತೆ, ನಿರಂತರ ಪರಿಶ್ರಮ, ಟೀಕೆಗಳ ನಡುವೆಯೂ ನಿಂತುಕೊಳ್ಳುವ ಶಕ್ತಿಯ ಪ್ರತಿರೂಪವಾಗಿದೆ.

ಸಚಿನ್ ಬಾಲ್ಯದಲ್ಲೇ ಕ್ರಿಕೆಟ್‌ಗೆ ಬದ್ಧನಾದರೂ, ಪ್ರಾರಂಭದ ದಿನಗಳು ಸುಲಭವಾಗಿರಲಿಲ್ಲ. ಚಿಕ್ಕ ದೇಹ, ವಯಸ್ಸು – ಇವುಗಳನ್ನು ನೋಡಿ ಹಲವರು ಅವನ ಸಾಮರ್ಥ್ಯವನ್ನು ಅನುಮಾನಿಸಿದರು. ಆದರೆ ಅವರ ಕೋಚ್ Ramakant Achrekar ಅವರು ಮಾತ್ರ ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಕಠಿಣ ಅಭ್ಯಾಸಕ್ಕೆ ಪ್ರೇರೇಪಿಸಿದರು.

ಸಚಿನ್ ದಿನಕ್ಕೆ ಹಲವು ಗಂಟೆಗಳ ಕಾಲ ನೆಟ್‌ನಲ್ಲಿ ಅಭ್ಯಾಸ ಮಾಡುತ್ತಿದ್ದರು. ಕೆಲವೊಮ್ಮೆ ಒಂದು ದಿನದಲ್ಲಿ ಹಲವು ಪಂದ್ಯಗಳನ್ನು ಆಡುತ್ತಾ ತಮ್ಮ ಕೌಶಲ್ಯವನ್ನು ಒರೆಗೆ ಹಚ್ಚಿದರು. ಇದೇ ಬಲವಾದ ಅಡಿಪಾಯವಾಯಿತು.

16ನೇ ವಯಸ್ಸಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟಾಗ, ಪಾಕಿಸ್ತಾನದ ಭಯಾನಕ ವೇಗದ ಬೌಲರ್‌ಗಳನ್ನು ಎದುರಿಸುವುದು ದೊಡ್ಡ ಸವಾಲಾಗಿತ್ತು. Wasim Akram, Waqar Younis ಮತ್ತು Imran Khan ಅವರಂತಹ ದಿಗ್ಗಜರ ಎದುರು ಸಚಿನ್ ಗಾಯಗೊಂಡರೂ ಹಿಂತಿರುಗಲಿಲ್ಲ. ಮುಖಕ್ಕೆ ಬಂತು, ರಕ್ತ ಹರಿಯಿತು, ಆದರೆ ಅವರು ಮೈದಾನದಲ್ಲೇ ಉಳಿದು ಆಟ ಮುಂದುವರೆಸಿದರು. ಇದು ಅವರ ಧೈರ್ಯ ಮತ್ತು ಗುರಿ ಸಾಧನೆಗೆ ಇರುವ ತಪಸ್ಸನ್ನು ತೋರಿಸುತ್ತದೆ.

ವೃತ್ತಿಜೀವನದ ಮಧ್ಯದಲ್ಲಿ ಅವರು ಹಲವು ತೊಂದರೆಗಳನ್ನು ಎದುರಿಸಿದರು. 1990ರ ದಶಕದಲ್ಲಿ ಭಾರತ ತಂಡವು ನಿರಂತರ ಸೋಲುಗಳನ್ನು ಅನುಭವಿಸಿದಾಗ, ಸಚಿನ್ ಮೇಲೆ ಅಪಾರ ಒತ್ತಡ ಬಿತ್ತು. "ತಂಡ ಗೆಲ್ಲಲು ಸಾಧ್ಯವಾಗುತ್ತಿಲ್ಲ, ಸಚಿನ್ ಮಾತ್ರ ಆಟ ಆಡುತ್ತಿದ್ದಾರೆ" ಎಂಬ ಟೀಕೆಗಳು ಕೇಳಿಬಂದವು. ನಾಯಕತ್ವದ ಹೊಣೆ ಹೊತ್ತಾಗ, ತಂಡದ ಸಾಧನೆ ನಿರೀಕ್ಷಿತ ಮಟ್ಟದಲ್ಲಿರಲಿಲ್ಲ. ಈ ಕಾರಣಕ್ಕೆ ನಾಯಕತ್ವದಿಂದ ಹಿಂದೆ ಸರಿಯಬೇಕಾಯಿತು – ಇದು ಅವರ ಜೀವನದ ಒಂದು ದೊಡ್ಡ ಹಿನ್ನಡೆಯಾಗಿತ್ತು.

ಮುಂದೆ ಬಂದ ದೊಡ್ಡ ಸವಾಲು ಗಾಯಗಳು. ವಿಶೇಷವಾಗಿ 'ಟೆನ್ನಿಸ್ ಎಲ್ಬೋ' ಸಮಸ್ಯೆ ಅವರ ವೃತ್ತಿಜೀವನವನ್ನು almost ಮುಗಿಸುವಂತಾಗಿತ್ತು. ಆ ಸಮಯದಲ್ಲಿ ಅನೇಕರು "ಸಚಿನ್ ಮುಗಿದಿದ್ದಾರೆ" ಎಂದು ತೀರ್ಪು ನೀಡಿದರು. ಆದರೆ ಅವರು ಅದನ್ನು ಒಪ್ಪಿಕೊಳ್ಳಲಿಲ್ಲ. ಶಸ್ತ್ರಚಿಕಿತ್ಸೆ, ಪುನರ್ವಸತಿ, ಮತ್ತೆ ಅಭ್ಯಾಸ—ಈ ಎಲ್ಲಾ ಹಂತಗಳನ್ನು ದಾಟಿ ಅವರು ಮತ್ತೆ ಕ್ರೀಡಾಂಗಣಕ್ಕೆ ಬಂದು ಅದ್ಭುತ ಪ್ರದರ್ಶನ ನೀಡಿದರು.

2007ರ ವಿಶ್ವಕಪ್ ನಂತರ ಅವರ ಮೇಲೆ ಟೀಕೆಗಳ ಮಳೆ ಸುರಿಯಿತು. ಅಭಿಮಾನಿಗಳ ನಿರಾಶೆ, ಮಾಧ್ಯಮದ ಒತ್ತಡ—ಇವೆಲ್ಲವು ಯಾರನ್ನಾದರೂ ಕುಗ್ಗಿಸಬಹುದಾಗಿತ್ತು.

> "ಕ್ಷಮತೆಯಲ್ಲಿ ಏರಿಳಿತ ಯಾವುದೇ ಕ್ಷೇತ್ರದಲ್ಲಾದರೂ ಸಾಮಾನ್ಯ. ಕ್ಷಮತೆಯಲ್ಲಿ ಕೊರತೆಯಾದರೆ ಐರಾಗೈರಾಗಳಿಂದಲೂ ಕೇಳಿಸಿಕೊಳ್ಳಬೇಕಾಗುತ್ತದೆ. ತಮ್ಮ ಕ್ಷಮತೆಯ ಬಗ್ಗೆ ಮೌಲ್ಯಮಾಪನ ಮಾಡಿಕೊಳ್ಳದವರೂ ಇತರರ ಕ್ಷಮತೆಯ ಬಗ್ಗೆ ಟಿಪ್ಪಣಿ ಮಾಡುವ ಅಭ್ಯಾಸ ಹೊಂದಿರುತ್ತಾರೆ."

ಆದರೆ ಸಚಿನ್ ಅದನ್ನು ತಮ್ಮ ಪ್ರೇರಣೆಯಾಗಿ ಬಳಸಿಕೊಂಡರು. ನಂತರದ ವರ್ಷಗಳಲ್ಲಿ ಅವರು ಕ್ರಿಕೆಟ್ ಇತಿಹಾಸದಲ್ಲೇ ಅಪ್ರತಿಮ ಸಾಧನೆಗಳನ್ನು ಮಾಡಿದರು – ಒಂದು ದಿನದ ಕ್ರಿಕೆಟ್‌ನಲ್ಲಿ ಮೊದಲ ದ್ವಿಶತಕ, 100 ಅಂತರರಾಷ್ಟ್ರೀಯ ಶತಕಗಳ ಸಾಧನೆ.

ಅವರ ಜೀವನದ ಶಿಖರ ಕ್ಷಣವೆಂದರೆ 2011 Cricket World Cup ಗೆಲುವು. 22 ವರ್ಷಗಳ ಕನಸು ಈಡೇರಿದಾಗ, ಅವರ ಕಣ್ಣುಗಳಲ್ಲಿ ಕಣ್ಣೀರು ತುಂಬಿತು. ತಂಡದ ಸಹ ಆಟಗಾರರು ಅವರನ್ನು ಹೆಗಲ ಮೇಲೆ ಹೊತ್ತು ಮೈದಾನ ಸುತ್ತಿಸಿದರು – ಇದು ಅವರ ಪರಿಶ್ರಮಕ್ಕೆ ದೊರೆತ ಗೌರವ.

ಭಾರತದ ಅತ್ಯಂತ ಶ್ರೇಷ್ಠ ಮಾಜಿ ಅಂತರರಾಷ್ಟ್ರೀಯ ಕ್ರಿಕೆಟಿಗ ಮತ್ತು ಮಾಜಿ ನಾಯಕ, 'ಲಿಟಲ್ ಮಾಸ್ಟರ್' ಮತ್ತು 'ಕ್ರಿಕೆಟ್ ದೇವರು' ಎಂದೇ ಕರೆಯಲ್ಪಡುವ ಇವರು ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿ **'ಭಾರತ ರತ್ನ'** (ಈ ಪ್ರಶಸ್ತಿ ಪಡೆದ ಮೊದಲ ಕ್ರೀಡಾಪಟು) ಮತ್ತು ಅರ್ಜುನ ಪ್ರಶಸ್ತಿ, ಖೇಲ್ ರತ್ನ, ಪದ್ಮವಿಭೂಷಣ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಸಚಿನ್ ತೆಂಡೂಲ್ಕರ್ ನಮಗೆ ಕಲಿಸುವ ಮಹತ್ವದ ಪಾಠವೆಂದರೆ:

ಟೀಕೆಗಳು, ಅವಮಾನಗಳು ಮತ್ತು ವಿಫಲತೆಗಳು ಜೀವನದ ಭಾಗ. ಆದರೆ ಅವುಗಳಿಗೆ ನಾವು ಕೊಡುವ ಪ್ರತಿಕ್ರಿಯೆಯೇ ನಮ್ಮ ಭವಿಷ್ಯವನ್ನು ನಿರ್ಧರಿಸುತ್ತದೆ. ಅವರು ಎಂದಿಗೂ ಟೀಕೆಗಳಿಗೆ ಉತ್ತರವನ್ನು ಮಾತಿನಿಂದ ಕೊಡಲಿಲ್ಲ; ತಮ್ಮ ಬ್ಯಾಟ್‌ನಿಂದ ಕೊಟ್ಟರು.

ಅವರ ಪಯಣ ಪ್ರತಿಯೊಬ್ಬರಿಗೂ ಒಂದು ಸಂದೇಶ ನೀಡುತ್ತದೆ –

"ಸಾಧನೆ ಎಂದರೆ ಒಂದೇ ದಿನದಲ್ಲಿ ಬರುವುದಲ್ಲ; ಅದು ಅನೇಕ ಸವಾಲುಗಳನ್ನು ಎದುರಿಸಿ, ಮತ್ತೆ ಮತ್ತೆ ಎದ್ದು ನಿಲ್ಲುವ ಮನೋಬಲದಿಂದ ಬರುತ್ತದೆ."

## ಬೌದ್ಧಿಕ ಸಿರಿ *"ಹಸು ಹಾಲು ಕೊಡುವುದಿಲ್ಲ."*

ಒಂದು ದಿನ ಬೆಳಿಗ್ಗೆ ಬೇಗನೆ ಒಬ್ಬ ಹುಡುಗ ಗ್ರಾಮದಲ್ಲಿ ನಡೆದು ಹೋಗುತ್ತಿದ್ದ. ಅಲ್ಲಿ ಒಬ್ಬ ರೈತ ಹಸುವಿನ ಹಾಲು ಕರೆಯುತ್ತಿದ್ದದ್ದನ್ನು ನೋಡಿ ಅವನಿಗೆ ಕುತೂಹಲವಾಯಿತು.

ಅವನು ಹತ್ತಿರ ಹೋಗಿ ಕೇಳಿದ, "ಅಂಕಲ್, ನಿಮ್ಮ ಹಸು ದಿನಕ್ಕೆ ಎಷ್ಟು ಹಾಲು ಕೊಡುತ್ತದೆ?"

ರೈತ ನಗುತ್ತಾ ಹೇಳಿದ, "ಹಸು ಹಾಲು ಕೊಡುವುದಿಲ್ಲ."

ಹುಡುಗ ಅಚ್ಚರಿಯಿಂದ ಕೇಳಿದ, "ಹೇಗೆ ಅಂಕಲ್? ನಾನು ಈಗಲೇ ನೀವು ಹಾಲು ಕರೆಯುತ್ತಿರುವುದನ್ನು ನೋಡಿದೆ!"

ರೈತ ನಿಧಾನವಾಗಿ ಹೇಳಿದ, "ಮಗಾ, ಹಸು ಸ್ವತಃ ಹಾಲು ಕೊಡೋದಿಲ್ಲ. ನಾವು ಬೆಳಗ್ಗೆ ಬೇಗ ಎದ್ದು ಅದನ್ನು ನೋಡಿಕೊಳ್ಳಬೇಕು, ಸಮಯಕ್ಕೆ ಮೇವು ಕೊಡಬೇಕು, ಅದನ್ನು ಸ್ವಚ್ಛವಾಗಿಡಬೇಕು, ಆರೋಗ್ಯ ಕಾಪಾಡಬೇಕು. ನಂತರ ಮಾತ್ರ ನಾವು ಹಾಲು ಪಡೆಯಬಹುದು."

ಅವನು ಮತ್ತಷ್ಟು ವಿವರಿಸಿ ಹೇಳಿದ, "ಜೀವನದಲ್ಲೂ ಹೀಗೇ. ಯಾವುದೂ ನಮ್ಮ ಕೈಗೆ ಸಿದ್ಧವಾಗಿ ಸಿಗುವುದಿಲ್ಲ. ನಾವು ಶ್ರಮಿಸಬೇಕು, ಕಾಳಜಿ ವಹಿಸಬೇಕು, ನಿಯಮಿತವಾಗಿರಬೇಕು. ಆಗ ಮಾತ್ರ ಫಲ ಸಿಗುತ್ತದೆ."

ಹುಡುಗ ಆ ಮಾತುಗಳನ್ನು ಆಲಿಸಿ ಆಳವಾಗಿ ಯೋಚಿಸಿದ. ಅವನಿಗೆ ಅರ್ಥವಾಯಿತು - ನಾವು ಬಯಸುವ ಯಶಸ್ಸು, ಸಂತೋಷ, ಗೌರವ - ಇವೆಲ್ಲವೂಗಳಿಗಾಗಿ ನಾವು ಶ್ರಮಿಸಲೇಬೇಕು.

ಜೀವನದಲ್ಲಿ ಯಾವುದೂ ಸಿದ್ಧವಾಗಿ ಸಿಗುವುದಿಲ್ಲ. ಶ್ರಮ, ಶಿಸ್ತು ಮತ್ತು ನಿರಂತರ ಪ್ರಯತ್ನ ಇದ್ದಾಗ ಮಾತ್ರ ನಾವು ಯಶಸ್ಸನ್ನು ಪಡೆಯಬಹುದು.

ಪ್ರಮೋದ್ ಬಾತ್ರಾ ಅವರ "Cows Don't Give Milk : It Has to be Extracted Drop by Drop" ಪುಸ್ತಕದ ಹಿಂದಿರುವ ಸ್ಫೂರ್ತಿ ಮತ್ತು ಕಥೆ.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಏಪ್ರಿಲ್ 14ರ ಸಭೆಯ ಛಾಯಾಚಿತ್ರಗಳು












## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 39ನೇ ವಾರದ ಸಭೆ 14/04/2026 ಮಂಗಳವಾರ RCC ಕಾರ್ಯಾಲಯದಲ್ಲಿ ನಡೆಯಿತು. ರೊ. ಸುನಿಲ್ ಕುಮಾರ್ ಅವರು ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು.

ರೊ. ಎ. ಗಣೇಶ್ ಅವರು ಪ್ರಾರ್ಥನೆ ನಡೆಸಿದರು. ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು ಎಲ್ಲರನ್ನೂ ಸ್ವಾಗತಿಸಿದರು.

ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು. ರೊ. ಸ್ಮಿತಾ ಕಾಮತ್ ಅವರು ಭಾನುವಾರ ನಡೆಯಲಿರುವ ಪಿಕ್ನಿಕ್ ಬಗ್ಗೆ ಮಾಹಿತಿ ನೀಡಿದರು.

ರೊ. ಪ್ರಭಾಕರ್ ಶೆಟ್ಟಿ ಅವರು ವಾರದ ಬುಲೆಟಿನ್ ಐಶ್ವರ್ಯ ವನ್ನು ಬಿಡುಗಡೆಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಅವರು ಸಹಕರಿಸಿದರು. ರೊ. ಪ್ರಭಾಕರ್ ಶೆಟ್ಟಿ ಅವರು ವಾರದ ಬುಲೆಟಿನ್ ಬಗ್ಗೆ ಬಹಳ ಮೆಚ್ಚುಗೆ ವ್ಯಕ್ತಪಡಿಸಿದರು. ಮುಂದಿನ ಸಾಲಿನ ಪದಾಧಿಕಾರಿಗಳಿಗೆ ಮಾರ್ಗದರ್ಶಕ ಸೂಚನೆಗಳನ್ನು ನೀಡಿದರು.

ರೊ. ಎ. ಗಣೇಶ್ ಅವರು ಪಿಕ್ನಿಕ್ ಬಗ್ಗೆ ಹಾಗೂ ಅಲ್ಲಿ ನಡೆಸಬಹುದಾದ ವೃತ್ತಿಪರ ಸೇವೆಯ ಗುರುತಿಸುವಿಕೆ ಮತ್ತು ಕೃಷಿ ಕಾರ್ಯಕ್ರಮಗಳ ಬಗ್ಗೆ ಸಲಹೆ ನೀಡಿದರು.

ರೊ. ಕೃಷ್ಣಪ್ಪ ಅವರು ಸದಸ್ಯರ ಹಾಜರಾತಿಯ ಬಗ್ಗೆ ಮಾತನಾಡಿ ಹೆಚ್ಚಿನ ಶ್ರಮ ವಹಿಸುವುದಾಗಿ ತಿಳಿಸಿದರು. ಇತರ Zone ಗಳಲ್ಲೂ ಐಸಿರಿಗೆ ಸಿಗುತ್ತಿರುವ ಮನ್ನಣೆ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ರೊ. ಸುನಿಲ್ ಕುಮಾರ್ ಅವರು ಪಿಕ್ನಿಕ್ ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಸದಸ್ಯರಲ್ಲಿ ವಿನಂತಿಸಿದರು.

ರೊ. ರಾಜೇಶ್ ಡಿ. ಶೆಣೈ ಅವರು ಅಂತಾರಾಷ್ಟ್ರೀಯ ವಲಯ 4, 5, 6, 7 ಬಗ್ಗೆ ಮಾಹಿತಿ ನೀಡಿದರು.

ನಿಯೋಜಿತ ಅಧ್ಯಕ್ಷರು ಮುಂದಿನ ವರ್ಷದ ಕಾರ್ಯಕ್ರಮಗಳ ವೇಳಾಪಟ್ಟಿ ತಯಾರಿಸಲು ಸಲಹೆಗಳನ್ನು ಕೋರಿದರು. ಹಾಗೂ ಮೇ 16, 17 ರಂದು ನಡೆಯಲಿರುವ ಜಿಲ್ಲಾ ಅಸೆಂಬ್ಲಿ "ಜ್ಞಾನವಲ್ಲರಿ"ಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ ನೀಡಿದರು. ವಲಯ ಸಾಂಸ್ಕೃತಿಕ ಕಾರ್ಯಕ್ರಮ ಅಥವಾ ಕ್ರೀಡಾಕೂಟದ ಸಮಯದಲ್ಲಿ ಪಿಕ್ನಿಕ್ ಅನ್ನು ಆಯೋಜಿಸುವಂತೆ ಸಲಹೆ ನೀಡಿದರು.....

## "ಐಶ್ವರ್ಯ" 41ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಸಾಪ್ತಾಹಿಕ "ಐಶ್ವರ್ಯ"ದ ನಲ್ವತ್ತೊಂದನೇ ಇ–ಸಂಚಿಕೆಯನ್ನು, ರೊ. ಪ್ರಭಾಕರ್ ಶೆಟ್ಟಿ ರವರು 14/04/2026ರ ವಾರದ ಸಭೆಯಲ್ಲಿ ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ 39ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ರೊ. PHF. ಡಾ. ಎ. ಗಣೇಶ್ ನಡೆಸಿ, ರೊ. ಅನಿಲ್ ಕುಮಾರ್ ಅದೃಷ್ಟಶಾಲಿಯಾಗಿ ಆಯ್ಕೆಯಾದರು.

*.... ಕಾರ್ಯದರ್ಶಿಯವರ ವರದಿ*

ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು ಸದ್ಯದಲ್ಲೇ ಜಾಯಿಂಟ್ ಬೋರ್ಡ್ ಮೀಟಿಂಗ್ ನಡೆಸಿ ಮುಂದಿನ ಸಾಲಿನ ಅಧ್ಯಕ್ಷರಿಗೆ ಯೋಜನೆಗಳನ್ನು ರೂಪಿಸಲು ಅನುವು ಮಾಡಿ ಕೊಡುವುದಾಗಿ ತಿಳಿಸಿದರು. ಲಕ್ಕಿ ರೋಟರಿಯನ್ ಆಯ್ಕೆಯನ್ನು ರೊ. ಎ. ಗಣೇಶ್ ಅವರು ನಡೆಸಿದರು. ಅಧ್ಯಕ್ಷರೇ ಲಕ್ಕಿ ರೋಟರಿಯನ್ ಆಗಿ ಆಯ್ಕೆ ಗೊಂಡರು. ಕಾರ್ಯದರ್ಶಿಯವರು ಧನ್ಯವಾದ ಸಮರ್ಪಿಸಿದರು.

ರೊ. ಸುನಿಲ್ ಕುಮಾರ್ ಅವರು ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.